# ಸಾಧನೆಯ ಮಾರ್ಗಗಳು



❁ ಮನುಷ್ಯನಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳು ಉಂಟಾಗುತ್ತವೆ. ಯಾರು ಜ್ಞಾನಮಾರ್ಗಿಗಳೋ ಅವರು ಈ ಅವಸ್ಥೆಗಳನ್ನು ತಿದ್ದಿ ತೇಲಿಸಿಬಿಡುತ್ತಾರೆ. 'ಬ್ರಹ್ಮ ಈ ಮೂರು ಅವಸ್ಥೆಗಳಿಗೆ ಅತೀತ; ಸ್ಥೂಲ ಸೂಕ್ಷ್ಮ ಕಾರಣ – ಈ ಮೂರು ದೇಹಗಳಿಗೆ ಅತೀತ; ಸತ್ತ್ವ ರಜಸ್ಸು ತಮಸ್ಸು – ಈ ಮೂರು ಗುಣಗಳಿಗೂ ಅತೀತ; ಕನ್ನಡಿಯಲ್ಲಿ ಬೀಳುವ ಪ್ರತಿಬಿಂಬದ ಹಾಗೆ ಇವೆಲ್ಲ ಬರೀ ಮಾಯೆ; ಪ್ರತಿಬಿಂಬ ಎಂದಿಗೂ ವಸ್ತುವಲ್ಲ; ಬ್ರಹ್ಮನೊಬ್ಬನೇ ವಸ್ತು. ಉಳಿದುದೆಲ್ಲ ಅವಸ್ತು' ಅಂತ ಅವರು ಹೇಳುತ್ತಾರೆ.

❁ ಬ್ರಹ್ಮಜ್ಞಾನಿಗಳು ಮತ್ತೆ ಹೇಳುತ್ತಾರೆ, 'ದೇಹಾತ್ಮ ಬುದ್ಧಿ ಇದ್ದಿತು ಎಂದರೆ ದ್ವೈತವನ್ನು ನೋಡಬೇಕಾಗುತ್ತದೆ; ಪ್ರತಿಬಿಂಬವೇ ಸತ್ಯ ಎಂಬ ಬೋಧೆಯಾಗುತ್ತದೆ. ಈ ಬುದ್ಧಿ ಹೋಯಿತು ಎಂದರೆ 'ಸೋಽಹಮ್', 'ನಾನೇ ಬ್ರಹ್ಮ' ಎಂಬ ಅನುಭೂತಿ ಉಂಟಾಗುತ್ತದೆ.'

❁ ಅನೇಕ ಮಾರ್ಗಗಳಲ್ಲಿ ವಿಚಾರಮಾರ್ಗವೂ ಒಂದು. ಇದು ವೇದಾಂತವಾದಿಗಳ ಮಾರ್ಗ. ಬೇರೊಂದು ಮಾರ್ಗವಿದೆ, ಭಕ್ತಿಮಾರ್ಗ. ಭಕ್ತನು ಬ್ರಹ್ಮಜ್ಞಾನ ಬೇಕೆಂದು ವ್ಯಾಕುಲಚಿತ್ತದಿಂದ ಅತ್ತರೆ, ಅದೂ ಆತನಿಗೆ ದೊರೆತುಬಿಡುತ್ತದೆ. ಜ್ಞಾನಯೋಗ ಮತ್ತು ಭಕ್ತಿಯೋಗ ಎರಡೂ ಭಗವಂತನ ಸಾಕ್ಷಾತ್ಕಾರಕ್ಕೆ ಮಾರ್ಗಗಳೇ.

❁ ಇವೆರಡೂ ಮಾರ್ಗಗಳಿಂದಲೂ ಬ್ರಹ್ಮಜ್ಞಾನವನ್ನು ಪಡೆಯಬಹುದು. ಕೆಲಕೆಲವರು ಬ್ರಹ್ಮಜ್ಞಾನವನ್ನು ಪಡೆದುಕೊಂಡ ನಂತರವೂ ಲೋಕಶಿಕ್ಷಣಾರ್ಥವಾಗಿ ಭಕ್ತರಾಗಿಯೇ ಉಳಿಯುವರು; ಉದಾಹರಣೆಗೆ ಅವತಾರಾದಿಗಳು. 'ಅಹಂ' ಎಂಬುದು ಸಹಜವಾಗಿ ನಮ್ಮನ್ನು ಬಿಟ್ಟು ಹೋಗುವುದಿಲ್ಲ. ಆ ಕಾರಣದಿಂದ ಭಕ್ತ ಜಾಗ್ರತ್ ಸ್ವಪ್ನ ಸುಷುಪ್ತಿ ಅವಸ್ಥೆಗಳನ್ನು ತಿದ್ದಿ ತೇಲಿಸಿಬಿಡುವುದಿಲ್ಲ. ಭಕ್ತ ಎಲ್ಲಾ ಅವಸ್ಥೆಗಳನ್ನೂ ಸ್ವೀಕರಿಸುತ್ತಾನೆ; ಸತ್ತ್ವ ರಜಸ್ಸು ತಮಸ್ಸು ಈ ಮೂರು ಗುಣಗಳನ್ನೂ ಅನುಮೋದಿಸುತ್ತಾನೆ. ಭಕ್ತನ ದೃಷ್ಟಿಯಿಂದ ಭಗವಂತನೇ ಚತುರ್ವಿಂಶತಿ ತತ್ತ್ವಗಳಾಗಿದ್ದಾನೆ, ಜೀವ ಜಗತ್ತಾಗಿದ್ದಾನೆ; ಆತನೇ ಸಾಕಾರ ಚಿನ್ಮಯ ರೂಪಿನಿಂದ ಕಾಣಿಸಿಕೊಳ್ಳುತ್ತಿದ್ದಾನೆ.

❁ ಯೋಗಗಳಲ್ಲಿ ಎರಡು ವಿಧ; ಮನೋಯೋಗ, ಕರ್ಮಯೋಗ. ಗುರುವಿನ ಉಪದೇಶಕ್ಕನುಗುಣವಾಗಿ ಪೂಜೆ, ತೀರ್ಥಯಾತ್ರೆ, ಜೀವಸೇವೆ ಇವನ್ನೆಲ್ಲ ಮಾಡುವುದಕ್ಕೆ ಕರ್ಮಯೋಗ ಅಂತ ಹೆಸರು. ಜನಕಾದಿಗಳು ಯಾವ ಕರ್ಮವನ್ನು ಮಾಡುತ್ತಿದ್ದರೂ ಅದಕ್ಕೂ ಕರ್ಮಯೋಗ ಅಂತ ಹೆಸರು. ಯೋಗಿಗಳು ಮಾಡುವ ಸ್ಮರಣ ಮನನಕ್ಕೆ ಮನೋಯೋಗ ಅಂತ ಹೆಸರು.

❁ ಭಕ್ತನು ವಿದ್ಯಾಮಾಯೆಯನ್ನು ಆಶ್ರಯಿಸಿಕೊಂಡು ಇರುತ್ತಾನೆ. ಸಾಧುಸಂಗ, ತೀರ್ಥಯಾತ್ರೆ, ಜ್ಞಾನ, ವೈರಾಗ್ಯ ಇವುಗಳೆಲ್ಲದರ ಆಶ್ರಯಮಾಡಿಕೊಂಡು ಇರುತ್ತಾನೆ. ಆತ ಹೇಳುತ್ತಾನೆ, '' 'ಅಹಂ' ಎಂಬುದು ಸಹಜವಾಗಿ ಹೋಗದೆ ಇರುವುದರಿಂದ, ಆ ನೀಚ 'ಅಹಂ' ಭಗವಂತನ ದಾಸನಾಗಿಯೋ, ಭಗವಂತನ ಭಕ್ತನಾಗಿಯೋ ಇರಲಿ'' ಅಂತ.

❁ ಭಕ್ತನಿಗೂ ಏಕಾಕಾರ ಜ್ಞಾನ ದೊರಕುತ್ತದೆ; ಆತನಿಗೆ ಭಗವಂತನೊಬ್ಬನಲ್ಲದೆ ಬೇರೆ ಏನೂ ಕಾಣದು. ಆತ ಎಲ್ಲವೂ 'ಸ್ವಪ್ನವತ್' ಅಂತ ಹೇಳುವುದಿಲ್ಲ, ಆದರೆ ಹೇಳುತ್ತಾನೆ, 'ಭಗವಂತನೇ ಸಮಸ್ತವೂ ಆಗಿದ್ದಾನೆ' ಅಂತ. ಮೇಣದ ತೋಟದಲ್ಲಿ ನಾನಾ ಆಕಾರಗಳನ್ನು ನೋಡಬಹುದು. ಆದರೆ ಪ್ರತಿಯೊಂದೂ ಮೇಣದಿಂದ ನಿರ್ಮಿತವಾದುದೆ.

❁ ಆದರೆ ಭಕ್ತಿ ಪಕ್ವವಾದಾಗ ಮಾತ್ರ ಈ ಅನುಭವ ದೊರೆಯುತ್ತದೆ. ದೇಹದಲ್ಲಿ ಪಿತ್ತ ಜಾಸ್ತಿಯಾದಾಗ ಕಾಮಾಲೆ ರೋಗ ಬರುತ್ತದೆ; ಆಗ ಎಲ್ಲವೂ ಹಳದಿಯಾಗಿ ತೋರುತ್ತದೆ. ಶ್ರೀಮತಿಯು (ರಾಧೆ) ಶ್ಯಾಮನ ಚಿಂತನೆ ಮಾಡಿ ಮಾಡಿ ಎಲ್ಲವೂ ಶ್ಯಾಮಮಯವಾಗಿರುವಂತೆ ಕಂಡಳು; ತಾನೂ ಶ್ಯಾಮನಾಗಿರುವಂತೆ ಆಕೆಗೆ ಅನುಭವವಾಯಿತು. ಪಾದರಸದ ಕೊಳದಲ್ಲಿ ಸೀಸ ಅನೇಕ ದಿವಸಗಳವರೆಗೆ ಬಿದ್ದಿದ್ದರೆ ಅದೂ ಪಾದರಸವಾಗಿಬಿಡುತ್ತದೆ. ಕೀಟ ಭ್ರಮರಕ್ಕೆ ಹೆದರಿ, ಅದರ ಚಿಂತನೆ ಮಾಡುತ್ತ ಮಾಡುತ್ತ ಸ್ತಬ್ಧವಾಗಿಬಿಡುತ್ತದೆ; ಅದರ ಚಲನೆಯೇ ನಿಂತು ಹೋಗಿ ಬಿಡುತ್ತದೆ. ಕೊನೆಗೆ ಅದು ಭ್ರಮರವೇ ಆಗಿಬಿಡುತ್ತದೆ. ಭಕ್ತನೂ ಭಗವಂತನ ಧ್ಯಾನ ಮಾಡಿ ಮಾಡಿ 'ಅಹಂ' ಶೂನ್ಯವಾಗಿಬಿಡುತ್ತಾನೆ; ಆಗ ಅನುಭವ ಪಡೆಯುತ್ತಾನೆ, 'ಆತನೇ ನಾನು' 'ನಾನೇ ಆತನು' ಎಂಬುದಾಗಿ. ಕೀಟ ಭ್ರಮರವಾಗಿ ಹೋಯಿತು ಎಂದರೆ, ಎಲ್ಲವೂ ಸಿದ್ಧಿಸಿದ ಹಾಗೆಯೇ; ಒಡನೆಯೇ ಮುಕ್ತಿ.

❁ ಎಲ್ಲಿಯವರೆಗೆ ಆತ 'ಅಹಂ' ಎಂಬುದನ್ನು ಇಟ್ಟಿರುವನೋ, ಅಲ್ಲಿಯವರೆಗೆ ಯಾವುದಾದರೂ ಒಂದು ಭಾವವನ್ನು —ಶಾಂತ, ದಾಸ್ಯ, ವಾತ್ಸಲ್ಯ ಇವೇ ಮೊದಲಾದುವನ್ನು ಆರೋಪಿಸಿಕೊಂಡು ಆತನನ್ನು ಕರೆಯಬೇಕು.

ಶ್ರೀರಾಮಕೃಷ್ಣ ವಚನವೇದದಿಂದ